ಶ್ರೀ ಬಸವರಾಜ ಹೆಚ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಪ್ರಕಾರ 7.11.2002ರಂದು ಟರ್ನ್‌ಕಿ ಬೇಸಿಸ್ ಮೇಲೆ ಕಂಟ್ರಾಕ್ಟರ್‌ಗೆ ಕೆಲಸ ವಹಿಸಲಾಗಿದೆ. ನೀವು ಹೇಳಿದ ಪ್ರಕಾರ ಮೆಟೀರಿಯಲ್ ಇನ್‌ಸ್ಪೆಕ್ಷನ್ ಆಗಬೇಕೆಂದು ಕಂಟ್ರಾ ಕ್ಟರ್ ತಮಗೆ ಏನು ಹೇಳಿದ್ದಾರೆ, ಅದು ನಿಜವಾದ ಮಾತು. ಜನವರಿಯಲ್ಲಿ ಆ ಮೆಟೀರಿಲ್ ಇನ್‌ಸ್ಪೆಕ್ಷನ್ ಕೂಡ ಆಗಿದೆ. ಈಗಾಗಲೇ ಅದು ಕೆಲಸ ಪ್ರಾರಂಭ ಮಾಡುವ ಹಂತದಲ್ಲಿ ಇದೆ. ಅದು ಆದಷ್ಟು ಬೇಗ ಕೆಲಸ ಪ್ರಾರಂಭ ಆಗಿ ತಮಗೆ ಆದಷ್ಟು ಬೇಗ ಆ ಕೆಲಸ ಪೂರೈಸಿಕೊಡುತ್ತೇವೆ.

ಶ್ರೀ ಕೆ. ಗೋಪಾಲ ಪೂಜಾರಿ :- ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ 200 ಉಪ ಗ್ರಾಮಗಳ ಪ್ರಸ್ತಾವನೆ ನಿಮ್ಮ ಇಲಾಖೆ ಮುಂದೆ ಇದೆ. ಈ ಟರ್ನ್‌ಕಿ ಬೇಸಿಸ್‌ನಲ್ಲಿ ನಮಗೆ ಅನುಮತಿ ಕೊಡುತ್ತೀರಿ ಅಥವಾ ಬೇರೆ ಯಾವ ಸ್ಕೀಮ್‌ನಲ್ಲಿ ಕೊಡುತ್ತೀರಿ? ನನ್ನ ಕ್ಷೇತ್ರದಿಂದ 200 ಉಪ ಗ್ರಾಮಗಳಿಗೆ ವಿದ್ಯುದ್ದೀಕರಣದ ಪ್ರಸ್ತಾವನೆಯನ್ನು ತಮಗೆ ಕಳುಹಿಸಿದ್ದೇವೆ.

ಶ್ರೀ ಬಸವರಾಜ ಹೆಚ್. ಪಾಟೀಲ್ :- ಆ ಯೋಜನೆ ತಮಗೆ ಸ್ಯಾಂಕ್ಷನ್ ಆದ ಮೇಲೆ ಈಗಾಗಲೇ ತಮ್ಮಲ್ಲಿ ಆಗಿರುವ ಕುಂದಾಪುರ 26 ಹ್ಯಾಮೆಲೆಟ್‌ಗಳು ಕಾರ್ಕಳ 50 ಒಟ್ಟು 76 ಮಂಜೂರಾಗಿದೆ. ಅದು ಟರ್ನ್‌ಕಿ ಬೇಸಿಸ್‌ನಲ್ಲಿ ಕೊಡಲಾಗಿದೆ. ಇನ್ನು ಮುಂದೆ ಇರತಕ್ಕಂತಹ ಹ್ಯಾಮಾಲೆಟ್‌ಗಳು ಕೆಪಿಟಿಸಿಎಲ್‌ನಿಂದ ಸರ್ಕಾರದಿಂದ ಮಂಜೂರಾದ ಮೇಲೆ ಟರ್ನ್ ಕಿ ಬೇಸಿಸ್ ಮೇಲೆ ಕೊಡುತ್ತೇವೆ.

ಅಧ್ಯಕ್ಷರು :- ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ: 11.3.03ರ ಲಿಖಿತ ಮೂಲಕ ಉತ್ತರಿಸುವ 176 ಪ್ರಶ್ನೆಗಳ ಪೈಕಿ 136 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಅನುಬಂಧ - 1

ಅಧ್ಯಕ್ಷರು :- ಮಂಡಿಸಲಾಯಿತು.

ಮಾನ್ಯ ಸದಸ್ಯರು :- ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು :- ಈ ಪರಿಪಾಠ ಹೋಗಬೇಕು. 10.30ಕ್ಕೆ ತಾವು ನೋಟಿಸ್ ಕೊಟ್ಟಿದ್ದೀರಿ. ಸರ್ಕಾರಕ್ಕೆ ನಾವು ವಿಷಯ ತಿಳಿಸಬೇಕು. ಬೇಡ? ಹಾಗಿದ್ದರೆ ನೀವು ಉತ್ತರ ಕಂಪೆಲ್ ಮಾಡಬೇಕಾಗಿಲ್ಲ. ಹಾಗಿದ್ದರೆ ಪ್ರಸ್ತಾಪ ಮಾಡಿ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ಬಿಜಾಪುರ-ಗದಗ್ ರೈಲ್ವೆ ಮಾರ್ಗದಲ್ಲಿ ಬ್ರಾಡ್‌ಗೇಜ್ ಪರಿವರ್ತನೆ

ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ (ಬಸವನ ಬಾಗೇವಾಡಿ) :- ಮಾನ್ಯ ಅಧ್ಯಕ್ಷರೆ, ಬಿಜಾಪುರ ಮತ್ತು ಗದಗ್‌ವರೆಗೆ ಇರತಕ್ಕಂತಹ ರೈಲು ಮಾರ್ಗವನ್ನು ಬ್ರಾಡ್‌ಗೇಜ್‌ಗೆ ಪರಿವರ್ತನೆ ಮಾಡಬೇಕೆಂಬ ಬೇಡಿಕೆ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂತಹ ವಿಷಯ. ಇದು ಉತ್ತರ ಭಾರತ ಮತ್ತು ದಕ್ಷಿಣ ಭಾರತಗಳನ್ನು ಜೋಡಣೆ ಮಾಡತಕ್ಕಂತಹ ಒಂದು ಪ್ರಮುಖವಾದ ರೈಲು ಮಾರ್ಗ. ಈ ರೈಲು ಮಾರ್ಗವನ್ನು ಕೇರಾಯ್ಡ್ ಯೋಜನೆಯಲ್ಲಿ ರಾಜ್ಯ ಸರ್ಕಾರದ ಅರ್ಧ ಹಣವನ್ನು ಕೊಡುವುದು ಮತ್ತು ಕೇಂದ್ರ ಸರ್ಕಾರ ಅರ್ಧ ಹಣ ಕೊಡುತ್ತದೆ.

ಎನ್ನುವ ಒಪ್ಪಂದದ ಮೇಲೆ ಇದನ್ನು ಬ್ರಾಡ್‌ಗೇಜ್‌ಗೆ ಪರಿವರ್ತನೆ ಮಾಡುವ ವಿಷಯವನ್ನು ಹೋದ ವರ್ಷ ಬಜೆಟ್‌ನಲ್ಲಿ ಕೂಡ ಸನ್ಮಾನ್ಯ ಮುಖ್ಯ ಮಂತ್ರಿಗಳು ಸಹ ಸಭೆಯಲ್ಲಿ ತಿಳಿಸಿದ್ದಾರೆ. ಜೊತೆಗೆ ಮಾನ್ಯ ರಾಜ್ಯಪಾಲರೂ ತಮ್ಮ ಭಾಷಣದಲ್ಲಿ ಕೂಡ ವಿಷಯ ಪ್ರಸ್ತಾಪವಾಗಿದೆ. ಹಾಗಿದ್ದರೂ ಕೂಡ ಇದುವರೆಗೆ ರಾಜ್ಯ ಸರ್ಕಾರದಿಂದ ಈ ಯೋಜನೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ಎಂಬುದನ್ನು ತಿಳಿಸಬೇಕು ಮತ್ತು ಕೇಂದ್ರ ಸರ್ಕಾರ ಎಷ್ಟು ಹಣ ಕೊಟ್ಟಿದೆ ಎಂಬುದನ್ನು ತಿಳಿಸಬೇಕು. ಈ ಕಾರ್ಯವನ್ನು ಯಾವಾಗ ಕೈಗೊಳ್ಳುತ್ತೀರಿ ಮತ್ತು ಯಾವಾಗ ಮುಗಿಸುತ್ತೀರಿ ಎಂಬುದನ್ನೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು. ಬಿಜಾಪುರ ಜಿಲ್ಲೆಯಲ್ಲಿ ಒಂದು ವಾರದಿಂದ ಧರಣಿ ನಡೆಯುತ್ತಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಬಂದ್ ನಡೆಯುತ್ತಿದೆ. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯ ಪ್ರಮುಖವಾದ ಬೇಡಿಕೆ. ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್‌ನಲ್ಲಿ ಘೋಷಣೆ ಮಾಡಿದ ಪ್ರಕಾರ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ ಪ್ರಕಾರ ತಮ್ಮ ಪಾಲಿನ ಹಣವನ್ನು ನಿಗದಿ ಮಾಡಿದ್ದಾರೆ ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಅವರಿಗೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್(ಬಾಗಲಕೋಟೆ) :- ಮಾನ್ಯ ಅಧ್ಯಕ್ಷರೆ, ಬಿಜಾಪುರ ಗದಗ ಗೇಜ್ ಪರಿವರ್ತನೆ ಕಾರ್ಯ ಕಳೆದ 10 ವರ್ಷಗಳಿಂದ ವಿಶೇಷವಾಗಿ ನೆನೆಗುದಿಗೆ ಬೀಳುತ್ತಾ ಬಂದಿತ್ತು. ಇವತ್ತು ಕೇರಾಯ್ಡ್ ಒಪ್ಪಂದ ಆದ ನಂತರ ಅಲ್ಲಿಯ ಜನರಿಗೆ ವಿಶೇಷವಾದ ಆಸಕ್ತಿ ಆಸೆ ಹುಟ್ಟಿದೆ. ರಾಜ್ಯ ಸರ್ಕಾರ ಉತ್ತರ ಕರ್ನಾಟಕದ ಬಗ್ಗೆ ವಿಶೇಷವಾದ ಕಾಳಜಿ ವಹಿಸುವ ಭರವಸೆ ಮೂಡಿದ ಸಂದರ್ಭದಲ್ಲಿ ಆ ಭಾಗದ ರೈಲ್ವೆ ಕೊಂಡಿ ಗದಗ್ ಬಿಜಾಪುರ ಇನ್ನು ಉಳಿದ ಎಲ್ಲಾ ಗೇಜ್ ಪರಿವರ್ತನೆ ಮಾಡುವ ಸಂದರ್ಭದಲ್ಲಿ ಐಲ್ಯಾಂಡ್ ಆಗಿ ಉಳಿದ ಈ ವ್ಯವಸ್ಥೆಯನ್ನು ಸರಿಪಡಿಸಬೇಕು. ತಕ್ಷಣ ವಿಶೇಷವಾದ ಅನುದಾನ ರಾಜ್ಯ ಸರ್ಕಾರದವರು ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ನನಗೆ ತಿಳಿದ ಮಟ್ಟಿಗೆ 50-50 ಪರ್ಸೆಂಟ್ ಶೇರ್‌ನಲ್ಲಿ ಮೂವತ್ತೇಳೂವರೆ 38 ಕೋಟಿ ರೂಪಾಯಿಗಳನ್ನು ಈ ಹಣಕಾಸು ವರ್ಷದ ಕೊನೆಯಲ್ಲಿ ಮಾರ್ಚ್ 31ರ ಕೊನೆಯೊಳಗೆ ಖರ್ಚು ಮಾಡಬೇಕಾಗಿತ್ತು ಎನ್ನುವ ಭಾವನೆ ಅಲ್ಲಿಯ ಜನರಿಗೆ ಇದೆ. ಕೇಂದ್ರ ಸರ್ಕಾರ ಕೂಡ ಕೇವಲ 10 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ಸನ್ಮಾನ್ಯ ಮುಖ್ಯ ಮಂತ್ರಿಗಳು ವಿಶೇಷವಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. ರಾಜ್ಯ ಸರ್ಕಾರದ ಪಾಲನ್ನೂ ಕೂಡ ಬಜೆಟ್‌ನಲ್ಲಿಯಾಗಲಿ, ಇದಕ್ಕಿಂತ ಪೂರ್ವದಲ್ಲಾಗಲಿ ಇದಕ್ಕೆ ತೊಡಗಿಸಿ ಇದೇ ವರ್ಷದಲ್ಲಿ ಈ ಯೋಜನೆ ಪೂರ್ಣಗೊಳಿಸುವಂತೆ ಮಾಡಬೇಕೆಂದು ಹೇಳುತ್ತೇನೆ. ಬಿಜಾಪುರದಲ್ಲಿ ಸತ್ಯಾಗ್ರಹ ನಡೆಯುತ್ತಿದೆ. ನಿನ್ನೆ ಬಾಗಲಕೋಟೆ ಸಂಸದರು, ಸಚಿವರು, ಶಾಸಕರು ಮತ್ತು ಅನೇಕ ಜನ ಸೇರಿ ವಾಣಿಜ್ಯ ಪ್ರತಿನಿಧಿಗಳು ಸೇರಿ ದೊಡ್ಡ ಪ್ರಮಾಣದ ಬಂದ್ ಆಗಿದೆ. ರೈಲ್ವೆ ರೋಕೋ ಆಗಿದೆ. ಇನ್ನು ಉಗ್ರವಾದ ಹೋರಾಟವಾಗುತ್ತಿದೆ. ಸರ್ಕಾರ ಈ ಸಂದರ್ಭದಲ್ಲಿ ತಕ್ಷಣ ಎಚ್ಚೆತ್ತುಕೊಳ್ಳಬೇಕು. ಸನ್ಮಾನ್ಯ ಮುಖ್ಯ ಮಂತ್ರಿಗಳು ವಿಶೇಷವಾದ ಗಮನ ಹರಿಸಬೇಕು. ಇದಕ್ಕೆ ಹೆಚ್ಚಿನ ಹಣ ಒದಗಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಎಸ್. ಶಿವಾನಂದ ಪಾಟೀಲ್ (ತಿಕೋಟಾ) :- ಮಾನ್ಯ ಅಧ್ಯಕ್ಷರೆ, ಬೆಳ್ಳುಬ್ಬಿಯವರು ಮತ್ತು ಪೂಜಾರ್‌ರವರು ಹೇಳಿದ ವಿಚಾರ ಕೇವಲ ರಾಜ್ಯ ಸರ್ಕಾರಕ್ಕೆ ಅಷ್ಟೇ ಸೀಮಿತ ಅಲ್ಲ,

ಕೇಂದ್ರ ಸರ್ಕಾರಕ್ಕೂ ಸೀಮಿತವಾಗಿದೆ. ಕಳೆದ ಹಲವಾರು ವರ್ಷಗಳಿಂದ ಈ ಯೋಜನೆ ಪೂರ್ಣಗೊಳಿಸುತ್ತೇವೆಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕೂಡ ಹೇಳಿದೆ. ಆದರಲ್ಲೂ ವಿಶೇಷವಾಗಿ ಮಾನ್ಯ ಹೆಚ್.ಕೆ. ಪಾಟೀಲರು 2004ನೇ ಸಾಲಿಗೆ ಬಿಜಾಪುರ ಗದಗ್ ನಾನು ಪೂರ್ತಿ ಮುಗಿಸುತ್ತೇನೆಂದು ಹೇಳಿಕೆ ಕೊಟ್ಟಿದ್ದೀರಿ. ಕೈರಾಡ್ ಸಂಸ್ಥೆ ಮುಖ್ಯ ಅಧ್ಯಕ್ಷರಾದ ಕೃಷ್ಣ ಕುಮಾರ್‌ರವರು ಅವರೂ ಕೂಡ ಈ ಹೇಳಿಕೆಯನ್ನು ಪುನರ್ ಉಚ್ಚಾರ ಮಾಡಿದ್ದಾರೆ. ದಯಮಾಡಿ ಕೇಂದ್ರ ಸರ್ಕಾರದಿಂದ ಕೇವಲ 10 ಕೋಟಿ ರೂಪಾಯಿ ಮಾತ್ರ ಹಣ ಒದಗಿಸಿದ್ದಾರೆ ಎಂದು ತಿಳಿದು ಬಂದಿದೆ. ಆದಕ್ಕೆ ರಾಜ್ಯ ಸರ್ಕಾರ ಕೊನೆ ಪಕ್ಷ ಕೈರಾಡ್ ವತಿಯಿಂದ ಆದರೂ ಈ ಯೋಜನೆಯನ್ನು 2004ರಲ್ಲಿ ಪೂರ್ಣಗೊಳಿಸುತ್ತೇವೆಂದು ಭರವಸೆಯನ್ನು ಬಿಜಾಪುರ ಮತ್ತು ಬಾಗಲಕೋಟೆ ಜನತೆಗೆ ಕೊಡುತ್ತೀರಿ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಬಿಜಾಪುರ ಮತ್ತು ಗದಗ್ ಬ್ರಾಡ್‌ಗೇಜ್ ಕನ್‌ವರ್ಷನ್ ಏನಿದೆ ಇದು ಬಹಳ ಮಹತ್ವದ್ದು. ನಾವು ಈಗಾಗಲೇ ಕೇಂದ್ರ ಸರ್ಕಾರದ ಮೇಲೆ ನಮ್ಮ ಪಕ್ಷದ ಕಡೆಯಿಂದ ಎಷ್ಟು ಒತ್ತಡ ತರಬೇಕು ತರುತ್ತಿದ್ದೇವೆ. ಎರಡು ವರ್ಷದ ಹಿಂದೆ ಘೋಷಣೆ ಮಾಡುವ ಸಂದರ್ಭದಲ್ಲಿ ಬಹುಶಃ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ತಾವು ಘೋಷಣೆ ಮಾಡಿದ್ದೀರಿ. ಈ ಕೆರಾಯ್ಡ್ ಎಂಬ ಸಂಸ್ಥೆಯನ್ನು ಮಾಡಿ ಆದರಲ್ಲಿ ಹಾಸನ, ಮಂಗಳೂರು, ಮತ್ತು ಬಿಜಾಪುರ - ಗದಗ್, ಏನು ನಡುಗಡ್ಡೆ ಪ್ರದೇಶವಾಗಿ ಉಳಿದಿದೆ ಇಲ್ಲಿ ಗೇಜ್ ಕನ್‌ವರ್ಶನ್ ಆಗಬೇಕಾಗಿತ್ತು, ಆದರೆ ಆಗದೇ ಹಾಗೆಯೇ ಉಳಿದಿದೆ. ಅದನ್ನು ತೆಗೆದುಕೊಳ್ಳಲು ನಿರ್ಧರಿಸಲಾಗಿತ್ತು. ಹೀಗಾಗಿ ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯು ಸುಮಾರು 39 ರಿಂದ 40 ಕೋಟಿ ರೂ.ಗಳನ್ನು ಒದಗಿಸಿದರೂ ಕೂಡ ಆ ಹಣ ಕಡಿಮೆಯೇ ಎಂದು ನಾನು ಹೇಳಬಯಸುತ್ತೇನೆಯೇ ವಿನಃ ಹೆಚ್ಚು ಕೊಟ್ಟಿದ್ದಾರೆ ಎಂದು ನಾನು ಹೇಳುವುದಿಲ್ಲ. ಆದರೆ ರಾಜ್ಯ ಸರ್ಕಾರದ ಕಡೆಯಿಂದ ಕೂಡ ಇದಕ್ಕೆ ಕಾಂಟ್ರಿಬ್ಯೂಶನ್ ಆಗಬೇಕಾಗಿದೆ. ಆ ಕೆರಾಯ್ಡ್ ಒಪ್ಪಂದದ ಪ್ರಕಾರ ರಾಜ್ಯ ಸರ್ಕಾರದ ಕಡೆಯಿಂದಲೂ ಕಾಂಟ್ರಿಬ್ಯೂಶನ್ ಆಗಬೇಕಾಗಿದೆ. ಬಹುಶಃ ರಾಜ್ಯ ಸರ್ಕಾರದ ಕಡೆಯಿಂದ ಇದಕ್ಕೆ ಹೆಚ್ಚಿನ ಹಣವನ್ನು ಕೊಟ್ಟರೆ ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯ ಮೇಲೆ ಕೂಡ ಒತ್ತಡವನ್ನು ತಂದು ನಾವು ಹೆಚ್ಚಿಗೆ ಹಣವನ್ನು ಇದಕ್ಕೆ ಒದಗಿಸುವುದಕ್ಕೆ ಸಾಧ್ಯತೆಗಳು ಇವೆ. ಆದಕ್ಕಾಗಿ ಇಂದು ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವ ಕೆಲಸವನ್ನು ಕೂಡ ಮಾಡಬೇಕಾಗಿದೆ. ತಾವು 27ನೇ ತಾರೀಖು ಬಜೆಟ್ ಮಂಡನೆ ಮಾಡುವವರಿದ್ದೀರಿ, ಆ ಸಂದರ್ಭದಲ್ಲಿ ಈ ಯೋಜನೆಗೆ ಕೆರಾಯ್ಡ್ ಒಪ್ಪಂದದ ಪ್ರಕಾರ ತಾವೇನು ಒಂದು ಸಂಸ್ಥೆಯನ್ನು ಮಾಡಿದ್ದೀರಿ ಅದಕ್ಕೆ ನೀವು ಹೆಚ್ಚಿನ ಅನುದಾನದ ಮೀಸಲಾತಿಯನ್ನು ಇಡುವಂಥದ್ದು ಬಹಳ ಅವಶ್ಯಕತೆ ಇದೆ. ಏಕೆಂದರೆ ಈ ಬ್ರಾಡ್‌ಗೇಜ್ ಕನ್‌ವರ್ಶನ್ ಬಹಳ ಮಹತ್ವದ್ದು ಇದೆ. ಏಕೆಂದರೆ ಇದು ಉತ್ತರ ಕರ್ನಾಟಕದ ಪೂರ್ಣ ಪ್ರಮಾಣದ ಸಂಪರ್ಕದ ಜಾಲವನ್ನು ಮಾಡುವಂಥದ್ದಾಗಿದೆ. ಏಕೆಂದರೆ ಇಂದು ಆಲ್ಲಿಂದ ನಮ್ಮ ಸೊಲ್ಲಾಪುರಕ್ಕೆ ನಮಗೆ ಕನಕ್ಷನ್ ಸಿಗುತ್ತದೆ. ಅಂತರ್‌ರಾಜ್ಯಕ್ಕೆ ಸಂಪರ್ಕ ಸಿಗುವಂಥದ್ದು. ಇದು ಬಹಳ ಮುಖ್ಯವಾದಂಥದ್ದು. ಇದು ಕೇವಲ ಬಿಜಾಪುರ - ಗದಗ್ ನಡುವೆ ಮಾತ್ರ ಸೀಮಿತವಾದುದಲ್ಲ, ಇದು ಅಂತರ್‌ರಾಜ್ಯದ

ಸಂಪರ್ಕ ಮಾಡುವಂಥದ್ದಾಗಿದೆ. ಹೀಗಾಗಿ ಈಗ ಆ ಕೊಂಡಿ ಬಿಚ್ಚಿಕೊಂಡುಬಿಟ್ಟಿದೆ. ಏನಾದರೂ ಇವೊತ್ತು ರಸ್ತೆ ಮುಖಾಂತರ ಮಾಡಬೇಕು. ಇವೊತ್ತು ಬಾಗಲಕೋಟೆ ಬಂದ್ ಆಚರಣೆಯಾಗಿದೆ. ಹೋರಾಟ ನಡೆಯುತ್ತಿದೆ. ಬಿಜಾಪುರದಲ್ಲಿ ಹೋರಾಟ ನಡೆಯುತ್ತಿದೆ, ದಿನನಿತ್ಯ ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರವನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಇದಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಅನುದಾನವಾಗಿ ಮೀಸಲಿಡಬೇಕಾದ ಒಂದು ಅವಶ್ಯಕತೆ ಇದೆ. ದಯವಿಟ್ಟು ಈ ವಿಚಾರದಲ್ಲಿ ಸ್ಪಂದಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :- ಉತ್ತರ ಹೇಳಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಇದಕ್ಕೆ ಇಂದು ಉತ್ತರ ಹೇಳುತ್ತೇವೆ ಎಂದು ಯಾರು ಹೇಳಿದ್ದರು?

ಅಧ್ಯಕ್ಷರು :- ಇಲ್ಲ, ಇಲ್ಲ, ನೀವು ಹೇಳುವುದು ಸರಿ. On that condition I allowed.

ಶ್ರೀ ಎಸ್.ಎಂ. ಕೃಷ್ಣ :- ಈಗ ತಾನೆ ನನ್ನ ನೋಟಿಸ್‌ಗೆ ಬಂದಿದೆ.

ಶ್ರೀ ಜಗದೀಶ್ ಶೆಟ್ಟರ್ :- ನಾವು ವಿಚಾರ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೇಳಿದ್ದು. ನಾವೇನೂ ಈಗಲೇ ಉತ್ತರ ಬೇಕೆಂದು ಒತ್ತಾಯ ಮಾಡುತ್ತಿಲ್ಲ.

ಶ್ರೀ ಎಸ್.ಕೆ. ಬೆಳ್ಳುಬ್ಬಿ :- ಮಾನ್ಯ ಅಧ್ಯಕ್ಷರೆ, ಒಂದು ವಿಷಯ.....

Mr. Speaker :- Mr. Bellubbi, I cannot allow. You have agreed in my Chambers that I do not ask for any reply.

ಶ್ರೀ ಎಸ್.ಕೆ. ಬೆಳ್ಳುಬ್ಬಿ :- ಹಣವನ್ನು ಒದಗಿಸುತ್ತೇವೆ ಎಂದಾದರೂ ಹೇಳಲಿ. ಅಷ್ಟನ್ನಾದರೂ ಹೇಳಲಿ.

ಅಧ್ಯಕ್ಷರು :- ನೋ, ಬೇಕಾಗಿಲ್ಲ. ಅಲ್ಲೊಂದು ತರಹ ಮಾತನಾಡೋದು, ಇಲ್ಲಿ ಬಂದು ಇಲ್ಲೊಂದು ತರಹ ಮಾತನಾಡೋದು ಸರಿಯಲ್ಲ.

ಶ್ರೀ ಎಸ್.ಎಂ. ಕೃಷ್ಣ :- ಅಲ್ಲ ದೇವ್ರ, ನಾನು ಉತ್ತರ ಹೇಳುತ್ತೇನೆ ಎಂದು ತಮಗೆ ಹೇಳಿದ್ದೆನೆ? ತಾವು ಅಪ್ಪಣೆ ಕೊಡಿಸಿದಿರಿ, ಉತ್ತರ ಹೇಳೋಕೇ ಒಪ್ಪಿಕೊಂಡಿದ್ದೇನೆ, ನಾನು ಹೇಳೋದು ಹೇಳುತ್ತೇನೆ ಅಂಥ ಹೇಳಿ. ನಿಮ್ಮ ಭಾಗದಲ್ಲಿ ನಡೆಯುತ್ತಿರತಕ್ಕಂಥ ವಿದ್ಯಮಾನಗಳು, ಬೆಳವಣಿಗೆಗಳ ಬಗ್ಗೆ ಸಭೆಯ ಗಮನವನ್ನು ಸೆಳೆಯುವುದಕ್ಕೆ ತಮಗೆ ಸಂಪೂರ್ಣವಾದ ಅಧಿಕಾರವಿದೆ ಹಾಗೂ ಸ್ವಾತಂತ್ರ್ಯವಿದೆ. ಅದಕ್ಕೆ ನಾನು ಸ್ಪಂದಿಸುತ್ತೇನೆ. ಆದರೆ ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವಾಗ ಸರ್ಕಾರದ ರೆಸ್ಪಾನ್ಸ್ ಯೋಗ್ಯವಾದ ರೀತಿಯಲ್ಲಿ ಬರಬೇಕಾದರೆ ಇದಕ್ಕೆ ನೋಟಿಸ್ ಬೇಕು. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಈಗಾಗಲೇ ಈ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದಾರೆ. ಇದನ್ನು ನಾನು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೇನೆ. ಏಕೆಂದರೆ ಈ ಕೆಲಸವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಒಟ್ಟಿಗೆ ಸೇರಿ ಮಾಡಬೇಕಾಗುತ್ತದೆ. ಆದುದರಿಂದ ತಾವೇನು ಈಗ ಸಮಸ್ಯೆ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದೀರಿ ಇದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.